ನಂಜೇರಿತ್ತು. ಅಮ್ಮ ತಿಂಗಳುಗಟ್ಟಲೆ ಅದಕ್ಕೆ ದಿನಾ ಕಾಯ್ಸೀರಿಗೆ ಎಣ್ಣೆ ಹಚ್ಚುತ್ತಿದ್ದಳು... ಕಾಮತರು ಹೋಟೆಲು ಮಾಡುವಾಗ ಆ ಜಾಲಿ ಮುಳ್ಳನ್ನೆಲ್ಲ ಸವರಿ, ಸುಡಿಸಿ... ಅಪ್ಪನಿಂದಲೆ ಗುದ್ದಲಿ ಪೂಜೆ ಮಾಡಿಸಿ... ಹೋಟೆಲ್ ಪ್ರಿಯ ತಲೆಯೆತ್ತಿತ್ತು...

ಹಾಗಿದ್ದರೆ ಇಲ್ಲಿ ಆ ಚಾನೆಲ್ ನೋಡಿದವರು ಯಾರೂ ಇಲ್ಲವೆ... ಬೇಡದ ಘಟನೆಗಳ ನೆನಪಿನ ಮೇಲಷ್ಟೆ ಜೀವಿಸುವವರೆ ಇವರೆಲ್ಲ... ತನ್ನನ್ನ ಹಳೆಯ ಭಟ್ಟನೆಂದಲ್ಲ, ನಿನ್ನೆ ಟೀವಿಯಲ್ಲಿ ಕಂಡವನು ಎಂದೂ ಯಾರೂ ಗುರುತು ಹಿಡಿಯಲಾರರೆ... ಮುಂತಾದ ಹಲವು ಯೋಚನೆಗಳು ಧುಮ್ಮಿಕ್ಕಿ ಏನೂ ಬಗೆ ಹರಿಯದೆ ಮೌನವಾಗಿ ಹೊರಬಂದ. ರಸ್ತೆಯಲ್ಲಿ ಜನ ವಿರಳವಾಗಿದ್ದರು. ಇನ್ನೂ ಹೊತ್ತೇರಿಲ್ಲವಲ್ಲ, ಟೂರಿಸ್ಟುಗಳು ಬಂದ ಬಳಿಕವೇ ಈ ಊರಿಗೆ ಜೀವ ಬರುವುದು ಎಂದುಕೊಳ್ಳುತ್ತ ರಸ್ತೆಯುದ್ದಕ್ಕೂ ನಡೆದ. ದಾರಿ ಸಾಗಿದಂತೆ ಊರ ಹೊರವಲಯಕ್ಕೆ ಆತ ತಲುಪಿದ್ದ. ಸ್ವಾಗತ ಕಮಾನಿನ ಬಳಿಯೆ ದೊಡ್ಡದೊಂದು ಕಟೌಟು ಕಾಣಿಸಿ ಕುತೂಹಲದಿಂದ ಬಳಿ ಬಂದು ನೋಡಿದರೆ ಪಂಚಾಯ್ತಿ ಅಧ್ಯಕ್ಷನಾದ ಈ ಇವನಿಗೆ ಹಾರ್ದಿಕ ಅಭಿನಂದನೆಗಳು ಎಂದು ಒಂದಿಪ್ಪತ್ತು ಜನ ಅಭಿಮಾನಿಗಳ ಹೆಸರು. ಮೇಲ್ಗಡೆ ಪಂಚಾಯ್ತಿ ಅಧ್ಯಕ್ಷನ ದೊಡ್ಡ ಫೋಟೊ. ಅರೆ, ಇವನನ್ನು ಎಲ್ಲೋ ನೋಡಿದ ಹಾಗಿದೆಯಲ್ಲ... ಮುಖದ ಚಹರೆ ನೋಡಿದರೆ, ವಿಶಾಲ ಗೌಡನೆ. ಅವನಿಗೆ ವಯಸ್ಸಾಗಿರಬಹುದು.. ಅವನ ತಮ್ಮ ವಿನಯ ಗೌಡ... ಓಹ್ ಹನ್ನೆರಡು ವರ್ಷದ ಹಿಂದಿನದು ತನಗೇನು ನೆನಪಿದ್ದೀತು... ತಾನು ಹೋಗುವಾಗ ಪಂಚಾಯ್ತಿ ಅಧ್ಯಕ್ಷ ಆಗಿದ್ದುದು ಯಾರು... ನೆನಪು ಕೈಕೊಡುತ್ತಿದೆ...

ಊರ ಹೊರಬಾಗಿಲ ಬಳಿ ಹನುಮಂತ ದೇವಸ್ಥಾನ. ಒಂದಿಷ್ಟು ಕುಳಿತು ಸುಧಾರಿಸಿಕೊಂಡು ಹೋದರಾಯಿತು, ಇನ್ನೂ ಒಂದು ಕಿಲೋಮೀಟರು ನಡೆಯಬೇಕಲ್ಲ, ಮುತ್ತಂಜಿ ಭಟ್ಟರನ್ನೂ ಮಾತಾಡಿಸಿದ ಹಾಗಾಯಿತು ಎನ್ನಿಸಿ ಪ್ರಾಂಗಣದೊಳಗೆ ಪ್ರವೇಶಿಸಿದ. ದೇವಸ್ಥಾನದ ಮೂರ್ತಿ ಕಾಣದಂತೆ ಪರದೆ ಇಳಿಬಿಡಲಾಗಿತ್ತು. ಓಹ್, ಇನ್ನೂ ಅಲಂಕಾರ ಮುಗಿಯಲಿಲ್ಲ ಅಂತ ಕಾಣುತ್ತೆ. ಇವತ್ತೆಲ್ಲೂ ಭಟ್ಟರಿಗೆ ಬೇರೆ ಕಾರ್ಯಕ್ರಮ ಇಲ್ಲವೇನೋ, ಇದ್ದಿದ್ದರೆ ಬೆಳಗಾಮುಂಚೆ ಗುಡಿ ಪೂಜೆ ಮುಗಿಸಿ ಹೊರಟು ಬಿಟ್ಟಿರುತ್ತಿದ್ದರು... ಎಲ್ಲೇ ದೇವಕಾರ್ಯ ಇದ್ದರೂ ಇಬ್ಬರು ಪುರೋಹಿತರು ಬೇಕು ಅಂತಾದರೆ ಅವರು ಕರೆದುಕೊಂಡು ಹೋಗುತ್ತಿದ್ದುದು ತನ್ನನ್ನೇ. ಅವರನ್ನ ಮಾತಾಡಿಸಿಕೊಂಡು ಹೋಗುವುದೇ ಒಳ್ಳಿತು. ಮುಂದಿನ ಜೀವನಕ್ಕೆ ತನಗೊಂದು ನೆಲೆ ಕೊಡುವವರೇ ಅವರು ಎನ್ನಿಸಿ ಅದೇ ಉಮೇದಿನಲ್ಲಿ ಢಣ್ ಎಂದು ಗಂಟೆ ಬಾರಿಸಿ ಕುಳಿತು ಕಾದ.

ದೇವರ ಪರದೆ ಸರಿಯಿತು. ಬಿಳಿ ಮೀಸೆ ಮತ್ತು ಬಿಳಿ ಗಡ್ಡದ ನಡುವೆ ಎಲೆಅಡಿಕೆ ಕೆಂಪಿನ ಮುರುಕು ಹಲ್ಲಿನ ಹೊಗೆಸೊಪ್ಪಿನ ಕಂಪಿನ ಬಾಯಿಯ ಮುತ್ತಂಜಿ ಭಟ್ಟರ ಮುಖ ಕಾಣಿಸಿ ಮತ್ತೆ ತಿರುಗಿತು. ಅವರ ಬಿಳಿ ಜುಟ್ಟವಿನ್ನು ತೇವವಾಗಿತ್ತು. ಪುನಃ ಪರದೆ ಮುಚ್ಚಿಕೊಂಡಿತು. ತನ್ನನ್ನ ಕಂಡದ್ದೆ ನಕ್ಕಂತೆ ಮಾಡಿದರೆ? ಹೌದು. ಮುತ್ತಂಜಿ ಭಟ್ಟರು ತನ್ನನ್ನು ನೋಡಿದರು ಮತ್ತು ಗುರುತಿಸಿದರು ಎನ್ನಿಸಿ ಅವನಿಗೆ ಖುಷಿಯಾಯಿತು.

★★★

'ನೋಡಪ್ಪ, ಕಪ್ಪುಬಟ್ಟೆಯ ಮೇಲೆ ಮಸಿಯ ಹನಿ ಬಿದ್ದರೆ ಯಾರೂ ತಲೆಕೆಡಿಸಿಕೊಳ್ಳುವುದಿಲ್ಲ. ಆದರೆ, ಬಿಳಿಬಟ್ಟೆಯ ಮೇಲೆ ಒಂದು ಸೂಜಿ ಮೊನೆಯಷ್ಟು ಕಪ್ಪು ಕಾಣಿಸಿದರೂ ಅದು ಎದ್ದು ಕಾಣುತ್ತದೆ. ನಾವು ಪುರೋಹಿತ ವರ್ಗದವರು ಶುಭ್ರವಾಗಿ ಕಾಣಿಸಿಕೊಂಡರಷ್ಟೆ ಬೆಲೆ. ಸಿಡಿಲಿನ ಮುಂಚಿನ ಮಿಂಚು ಬಂದರೆ ಸಾಕಿತ್ತೇನೋ. ಸಿಡಿಲು ಬೇಡವಾಗಿತ್ತು. ನೀನು ಒಮ್ಮೆಗೆ ದುಡುಕಿಬಿಟ್ಟೆ. ಹೋಗಲಿಬಿಡು. ಹಳೆಯದನ್ನ ನೆನಪು ಮಾಡಿಕೊಂಡರೆ ಅದನ್ನೇನು ಬದಲಾಯಿಸಲಿಕ್ಕೆ ಆಗುತ್ತದಾ?